ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 2, Sep-Oct 2022, Pp. 14-18.**
**©*IIMRD*, Mysuru.**

IIMRD JOURNALS

**www.iimrd.com**

# ತತ್ವಪದಕಾರರ ತಾತ್ವಿಕ ಚಿಂತನೆ

**ಅಶ್ವಿನಿ ಪ್ರಭಾಕರ***

*ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***ಸಾರಾಂಶ: (Abstract)***

*ತತ್ವಪದಕಾರರು ಸಾಮಾನ್ಯವಾಗಿ ಬಡವರು, ಸಂಸಾರಿಗಳಾಗಿದ್ದರೂ ಕೂಡ ಸಂಸಾರದಿಂದ ದೂರಾದವರು. ಹೀಗಾಗಿ ಇವರು ದೈಹಿಕ ಮತ್ತು ಸಂಸಾರಿಕ ಅನುಭವ ಪಡೆದವರು. ಸಂಸಾರದ ಸೆಳೆತಗಳಿಂದ ಬಿಡಿಸಿಕೊಳ್ಳಲು ಆಗದೇ ಅವುಗಳ ನಿಜ ಸ್ವರೂಪದ ಬಗ್ಗೆ ತಮ್ಮ ತಾತ್ವಿಕ ನಿಲುವುಗಳನ್ನು ಹಾಡಿನಲ್ಲಿ ಹೇಳುತ್ತಾ ಹೊರಟವರು. ಆದರೆ ಇವರು ಎಂದೂ ಸಂಸಾರ ಬೇಡ ಎಂದವರಲ್ಲ. ನೀರ ಮೇಲಿನ ಗುಳ್ಳೆಯಂತಿರುವ ಮಣ್ಣಿನ ಕಾಯವಾಗಿರುವ ಈ ದೇಹದ ಬಗ್ಗೆ ಮೂರು ದಿನದ ಸಂತೆಯಾದ ಸಂಸಾರದ ಬಗ್ಗೆ ಅವರು ತಮ್ಮ ತಾತ್ವಿಕ ಚಿಂತನೆಗಳನ್ನು ಹಾಡಿನಲ್ಲಿ ವಿವರಿಸುತ್ತಾರೆ. ಮಲ–ಮೂತ್ರದ ಆಗರವಾಗಿರುವ ಈ ದೇಹದ ಬಗ್ಗೆ, ಈ ಹೇಸಿಗೆ ಸಂಸಾರದ ಬಗ್ಗೆ, ವಾಸ್ತವ ಸಂಗತಿಗಳನ್ನು ಬಿಚ್ಚಿಡುತ್ತಾರೆ. ಇವುಗಳನ್ನು ಬಹುವಾಗಿ ನಂಬಿದರೆ ಏನೂ ಪ್ರಯೋಜನವಿಲ್ಲ ಎಂಬ ಎಚ್ಚರಿಕೆಯನ್ನು ಕೊಡುವ ಬಹುದೊಡ್ಡ ಕೆಲಸವನ್ನು ತತ್ವಪದಕಾರರು ಮಾಡುತ್ತಾರೆ.*

***ಮುಖ್ಯಪದಗಳು (Keywords):*** *ತತ್ವಪದ, ತತ್ವಪದಕಾರರು, ಸಂಸಾರ, ದೇಹ, ಸಮಾಜ, ಮಾರ್ಗ.*

**ಪೀಠಿಕೆ**

ತತ್ವಪದಕಾರರಿಗೆ ಸಂಸಾರವೇ ಬಹುಮುಖ್ಯವಾದರೂ ಸಂಸಾರಕ್ಕೆ ಕಾರಣವಾಗುವ ಕಾಯ, ಸಂಸಾರದಿಂದ ಉಂಟಾಗುವ ಸಮಾಜದ ಬಗ್ಗೆ ಅವರ ಕಾಳಜಿಗಳು ವಿಸ್ತರಿಸಿಕೊಳ್ಳುತ್ತವೆ. ಹೀಗಾಗಿ ದೇಹ, ಸಂಸಾರ, ಸಮಾಜ ಇವು ತತ್ವಪದಕಾರರ ಮೂರು ಬಹುಮುಖ್ಯ ನೆಲೆಗಳಾಗಿವೆ. ಅದರಲ್ಲೂ ಅವರ ತತ್ವಜ್ಞಾನದ ಬಹುಮುಖ್ಯ ನೆಲೆಗಳೆಂದರೆ ದೇಹ ಮತ್ತು ಸಂಸಾರಗಳೆ ಆಗಿವೆ. ಸಮಾಜದ ಬದುಕು ಅವರಿಗೆ ಸಹಜವಾದುದು ಅದಕ್ಕಾಗಿ ಅವರು ಸಂಸಾರದಲ್ಲಿ ಮತ್ತು ಅದಕ್ಕೆ ಕಾರಣವಾಗುವ ದೇಹಗುಣಗಳಲ್ಲಿ ಬದುಕಿನ ತೊಡಕಿನ ಸಂಗತಿಗಳನ್ನೆಲ್ಲಾ ಮೊದಲು ಕಾಣುತ್ತಾರೆ.

ತತ್ವಪದಕಾರರಿಗೆ ಸಂಸಾರದ ನಿಜವಾದ ಗುಣ ಅಂದರೆ ಸಂಸಾರ ಮತ್ತು ದೇಹದ ನಿಜವಾದ ಗುಣ ಅಂದರೆ ದೇಹ ಮತ್ತು ಸತ್ಯ ದೇಹದ ವಾಸ್ತವ ಈ ಎರಡು 'ತಾತ್ವಿಕ ಸತ್ಯ' ಸಂಗತಿಗಳು ಇವರನ್ನು ಸದಾ ಕಾಡುತ್ತಿರುತ್ತವೆ. ದೇಹ ಮತ್ತು ಸಂಸಾರಗಳ ಬಗ್ಗೆ ನಮಗೆ ಸಹಜವಾಗಿ ಅರಿವಿಗೆ ಬಾರದ ಇನ್ನೊಂದು ಮಗ್ಗುಲಿನ ಸತ್ಯಸಂಗತಿಗಳನ್ನು ತಮ್ಮ ಹಾಡುಗಳಲ್ಲಿ ವಿವರಿಸುತ್ತಾರೆ. ನಮ್ಮ ಬೆನ್ನು ನಮಗೆ ಕಾಣದು, ಇದು

***Please cite this article as:*** *ಅಶ್ವಿನಿ ಪ್ರಭಾಕರ* (2022). ತತ್ವಪದಕಾರರ ತಾತ್ವಿಕ ಚಿಂತನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ.* 14–18.

ಮನುಷ್ಯನ ಮಿತಿ ನಮಗೆ ಕಾಣದ ನಮ್ಮದನ್ನು ಅರಿಯುವ ಪ್ರಯತ್ನ ನಾವು ಮಾಡಬೇಕು ಎಂಬುದು ತತ್ವಪದಕಾರರ ಮುಖ್ಯ ತಾತ್ವಿಕ ಚಿಂತನೆ. ತತ್ವಜ್ಞಾನ ಸಂಸಾರದ ತಾತ್ವಿಕ ಸ್ವರೂಪ, ದೇಹದ ತಾತ್ವಿಕ ಸ್ವರೂಪಗಳ ವಿವರಣೆಗಳು ಇವರ ಹಾಡುಗಳಲ್ಲಿ ಪ್ರಮುಖವಾಗಿ ಕಾಣುತ್ತವೆ. ಜೊತೆಗೆ ಸಾಮಾಜಿಕ ಬದುಕಿನಲ್ಲಿ ನೀತಿಯ ಮಹತ್ವವನ್ನು, ನೀತಿಗೆ ಬಗ್ಗದ ಜನರ ಬಗ್ಗೆ ಒಂದಿಷ್ಟು ವಿಡಂಬನಾತ್ಮಕವಾಗಿ ಹೇಳುವ ರೂಢಿಯನ್ನು ಇವರು ಬೆಳೆಸಿಕೊಂಡಿರುತ್ತಾರೆ.

**ಗುರು–ಮಾರ್ಗದರ್ಶಕ**

ಸಂಸಾರದಲ್ಲಿ ಗುರುವೊಬ್ಬರ ಅವಶ್ಯಕತೆಯನ್ನು ತತ್ವಪದಕಾರರು ಒತ್ತಿ ಹೇಳುತ್ತಾರೆ. ಗುರುವಿನ ಅವಶ್ಯಕತೆ, ಮಾರ್ಗದರ್ಶನದ ಜರೂರು ತತ್ವಪದಗಳ ಭಾಗವಾಗಿ ಮಹತ್ವ ಪಡೆಯುತ್ತವೆ. ಬದುಕಿನಲ್ಲಿ ಎದುರಾಗುವ ಎಲ್ಲಾ ಸಂಕಟಗಳಿಂದ ಪಾರು ಮಾಡಲು ಅಗತ್ಯವಾಗಿ ಒಬ್ಬ ಗುರು–ಒಬ್ಬ ಅನುಭಾವಿಯಾದ ಹಿರಿಯನ ಪರಿಕಲ್ಪನೆಯನ್ನು ಎಲ್ಲ ತತ್ವಪದಕಾರರಲ್ಲಿ ಕಾಣಬಹುದಾಗಿದೆ. ಈತ ನಿಜವಾದ ಮಾರ್ಗದರ್ಶಕ, ಈತನನ್ನು ತನ್ನ ಆರಾಧ್ಯ ದೈವದ ರೂಪದಲ್ಲಿ ಕಾಣಲು ಪ್ರಯತ್ನಿಸುತ್ತಾರೆ. ಸಾಮಾನ್ಯವಾಗಿ ಬದುಕಿನಲ್ಲಿ ಗುರು ಅಥವಾ ಮಾರ್ಗದರ್ಶಕ ಅವಶ್ಯಕವಾಗಿದೆ. ಈತನು ಶಿಷ್ಯರನ್ನು ಪಡೆಯುವ, ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡುವ ಅನುಭವವುಳ್ಳವನಾಗಿರಬೇಕಾದುದು ಅವಶ್ಯ, ತಾವು ಹಿಡಿದ ಮಾರ್ಗದಲ್ಲಿ ಎಡತೊಡರುಗಳು ಬಂದಾಗ ಅವನ್ನು ಪರಿಹರಿಸಿ ಪಾರು ಮಾಡುವವ ಈ ಗುರುವೆ. (ಎಂದು ತತ್ವಪದಕಾರರು ವೈಚಾರಿಕವಾಗಿ ಗುರುವಿನ ಮಹತ್ವ ಸಾರಿ ಹೇಳುತ್ತಾರೆ) ಗುರು ಮಾರ್ಗದರ್ಶಕನೂ ಹೌದು, ದೇವರು ಹೌದು. ಹೀಗಾಗಿ ಗುರುವಿನ ಮಹತ್ವ ತತ್ವಪದಕಾರರಲ್ಲಿ ಬಹುಮುಖ್ಯವಾಗಿ ಕಾಣುತ್ತದೆ. ಈ ಎಲ್ಲಾ ವಿವರಗಳನ್ನು ಗಮನಿಸಿದರೆ 'ಗುರು'ಎನ್ನುವುದು ಇವರು ಬಳಸುವ ಒಂದು ತಾತ್ವಿಕ ಪರಿಕಲ್ಪನೆಯಾಗಿ ಕಾಣುತ್ತದೆ. ತಮ್ಮ ಬದುಕಿನ ಆತಂಕಗಳಲ್ಲಿ ಸಹಾಯಕ್ಕೆ ಬರುವ ಶಕ್ತಿ'ಯಂತೆ ಈ ಪರಿಕಲ್ಪನೆ ಕಾಣುತ್ತದೆ.

ಈ ಗುರುವು ಜನನ ಮರಣವನ್ನು ಗೆದ್ದವನು, ಜ್ಞಾನಮೂರ್ತಿ, ಎಲ್ಲಾ ಶಾಸನಗಳನ್ನು ಬಲ್ಲವನು ಹಮ್ಮುಗಮ್ಮು ಎರಡು ಇಳಿದು ಬ್ರಹ್ಮನು ತಾನೆಂದು ತಿಳಿದು 'ಸುಮಗೆ ನಿರ್ಬಯಲಾದ ನೀತ ನಮ್ಮ ಕಡಲೂರೇಶತಾನಮ್ಮ'ಎಂದು ಗುರುವಿನ ನಿಲುವನ್ನು ವರ್ಣಿಸುತ್ತಾರೆ ಕೂಡಲೂರು ಬಸವಲಿಂಗ ಶರಣರು (ತತ್ವಪದ ಪ್ರವೇಶಿಕೆ 171)

**ಸಂಸಾರ ಸತ್ಯ**

ಸಂಸಾರವೆಂದರೆ ಜೀವನ, ಬದುಕು ಹೌದು. ಇದು ವ್ಯಾಪಕವಾದ ಅರ್ಥದಲ್ಲಿ ಸತ್ಯ. ಆದರೆ ಸಂಸಾರ ಎಂದಾಗ ಅದು ಪ್ರಾರಂಭವಾಗುವುದು. ತಾಯಿಯ ಗರ್ಭದಲ್ಲಿ ತಾನು ಹೊಟ್ಟೆಯಲ್ಲಿ ಅಂಕುರಿಸಿದಾಗಿನಿಂದಲೇ ಎಂಬುದು ತತ್ವಪದಕಾರರ ಅಭಿಪ್ರಾಯ. ತಾಯಿಯ ಗರ್ಭದಿಂದ ಹೊರಬಂದು ಮೊಲೆ ಹಾಲು ಕುಡಿಯುತ್ತಲೇ ಈ ಸಂಸಾರದ ಮೋಹವು ಮೈಮನಸ್ಸುಗಳ ಗುಣವಾಗಿ ಬೆರೆಯುವ, ಬೆಳೆಯುವ ಪರಿಯನ್ನು ಅವರು ವೈಜ್ಞಾನಿಕವಾಗಿ ವಿವರಿಸುತ್ತಾರೆ. ಸಿರಗಾಪುರ ಬಂಡೆಪ್ಪನ ಈ ನುಡಿಗಳನ್ನು ಆಲಿಸಿದರೆ ಈ ಸಂಸಾರ ಹೇಗೆ ಮಾಯದ ಮುಸುಕಾಗಿ ಬೆಳೆದು ನಿಲ್ಲುತ್ತದೆ ಎಂಬುದು ನಮ್ಮ ಗಮನಕ್ಕೆ ಬರುತ್ತದೆ.

*ಆಶೆ ಎಂಬೊ ಬ್ರಹ್ಮನ ಬಿಂದು ಬಲಿದು*
*ಕಾಶಿ ಎಂಬೊ ತಾಯೊಳು ಬಂದು ಬೆಳೆದು*
*ಹೇಸಿ ಮಲ–ಮೂತ್ರ ಕೆಲ ದಿನ ಸವಿದು*
*ಘಾಸಿ ಸೆರೆಮನೆಯೊಳು ಸಿಲ್ಕಿ ನವಮಾನಗಳದು ॥1॥*

ತತ್ವಪದಕಾರರು ಹೆಚ್ಚಾಗಿ ಲಕ್ಷದಲ್ಲಿಟ್ಟುಕೊಳ್ಳುವುದು ಕೌಟುಂಬಿಕ ಬದುಕನ್ನು. ತಂದೆ–ತಾಯಿ ಹೆಂಡಿರು–ಮಕ್ಕಳು, ಬಂಧು–ಬಾಂಧವರು ಮತ್ತು ಈ ವಲಯದ ಪ್ರಮುಖ ಸಂಬಂಧಿಕರನ್ನು ಹೀಗಾಗಿ ಕೌಟುಂಬಿಕ ಬದುಕನ್ನೇ ಮುಂದಿಟ್ಟುಕೊಂಡು ಇಡೀ ಜೀವನದ ಗ್ರಹಿಕೆಯನ್ನು ಅವರು ವಿಸ್ತರಿಸಿಕೊಳ್ಳುತ್ತಾರೆ. ಒಬ್ಬ ಅಜ್ಞಾತ ಕವಿ ಹೀಗೆನ್ನುತ್ತಾನೆ.

*'ಏನಿದು ಮಾಯಾ ಸಂಸಾರ*
*ಹೆಂಡರು ಮಕ್ಕಳಿಗಾಗಿ ದಂಡಿಸಿದ ದೇಹವು*
*ದಂಡುಧರರು ಎಳೆಹುವರೇನಿದು'*

ಅದಕ್ಕಾಗಿ ತತ್ವಪದಕಾರರ ಸಂಸಾರದ ಕಲ್ಪನೆ ಬಹುಮಟ್ಟಿಗೆ ಕೌಟುಂಬಿಕ ಜೀವನವೇ ಮುಂದಿಟ್ಟುಕೊಂಡು ಹೊರಟು, ಇಡೀ ಬದುಕಿನ ಪರಿಕಲ್ಪನೆಯನ್ನು ಲೆಕ್ಕಿಸಿಕೊಳ್ಳುತ್ತದೆ.

**ದೇಹ ಸತ್ಯ**

ಜನಪದ ಸಾಹಿತ್ಯದಲ್ಲಿ ವರ್ಣನೆ ಕಡಿಮೆ, ಆದರೆ ಇವರ ತಾತ್ವಿಕ ಚರ್ಚೆಯಲ್ಲಿ ವಿಶೇಷವಾಗಿ ದೇಹ ಸತ್ಯದ ವರ್ಣನೆ ಅಗಾಧ ಪ್ರಮಾಣದಲ್ಲಿ ಬರುವುದನ್ನು ಕಾಣುತ್ತೇವೆ. ದೇಹ ಸತ್ಯಕ್ಕೆ ಸಂಬಂಧಿಸಿದಂತೆ ತತ್ವಪದಕಾರರ ಕಲ್ಪನೆ ಹೇಗಿದೆ ಎಂಬುವುದನ್ನು ಹಿಡಿದಿಡಲು ಸಾಕಷ್ಟು ಹಾಡುಗಳನ್ನು ಗಮನಿಸಿ ಮುಖ್ಯವಾದ ಕಲ್ಪನೆಗಳನ್ನೊಳಗೊಂಡ ಹಾಡುಗಳನ್ನು ನಾಲ್ಕು ಭಾಗದಲ್ಲಿ ಕೊಡಲಾಗಿದೆ. ಅವುಗಳೆಂದರೆ ದೇಹದ ಗುಣ, ದೇಹ ದೇವರ ಗುಡಿ, ಅಂತರಂಗದ ಹಾವಳಿ ಮತ್ತು ಅಂತರಂಗದ ಅನುಭಾವ. ತತ್ವಪದಗಳ ಅಧ್ಯಯನದಿಂದ ದೊರೆಯುವ ಈ ವಿಭಾಗೀಯ ಕ್ರಮವನ್ನು ಗಮನಿಸಿದರೆ ಮೊದಲಿನ ಭಾಗದಲ್ಲಿ ದೇಹದ ಆಕಾರ–ರಚನೆ ಮತ್ತು ಗುಣ ಇವುಗಳ ಬಗ್ಗೆ ಅವರಿಗೆ ಆಸಕ್ತಿ ಇದೆ ಎಂಬುದು ಸ್ಪಷ್ಟವಾಗುತ್ತದೆ. ಈ ದೇಹ ಗುಣಗಳನ್ನು ಪರಿಪರಿಯಾಗಿ ವರ್ಣನೆ ಮಾಡುವ ಅವರ ರೀತಿ ಗಮನಾರ್ಹವೆನಿಸುತ್ತದೆ. ದೇಹದ ಆಕಾರ, ದೇಹದ ರಚನೆ, ದೇಹದ ಚಲನಶೀಲ ಗುಣಗಳು, ದೇಹ ರಚನೆಗೆ ಬಳಸಿದ ವಸ್ತುಗಳು, ಈ ದೇಹದ ತಯಾರಿ ಹೇಗೆ, ಮುಂತಾದ ಸಂಗತಿಗಳನ್ನು ಅವರು ವೈಚಾರಿಕವಾಗಿ ಚಿಂತನೆ ಮಾಡಿದ್ದಾರೆ. 'ಮುಟ್ಟಾದ ಮೂರು ದಿನಕ ಹುಟ್ಟಿಬಂದಿರಿ ನೀವು' ಎನ್ನುವ ವೈಜ್ಞಾನಿಕ ಸತ್ಯವು ಅವರಿಗೆ ಗೊತ್ತಿದೆ. ದೇಹ ಎನ್ನುವುದು ತಾಯಿ–ತಂದೆಗಳ ಕೊಡುಗೆ ಎಂಬ ಸತ್ಯವನ್ನು ಅರಿತು ಅವರು ಕೊಡುವ ಒಟ್ಟು ದೇಹ ಸ್ವರೂಪದ ಕಲ್ಪನೆ, ಚರ್ಚೆ ದೇಹದ ಅನಂತರ ಮಗ್ಗಲುಗಳನ್ನು ತೆರೆದಿಡುತ್ತದೆ. (ತತ್ವಪದ ಪ್ರವೇಶಿಕೆ, 172)

'ಮಣ್ಣಿಂದೋದೇಹ ಮಣ್ಣಿಂದು'ಎಂಬುದು ತತ್ವಪದಕಾರರ, ಈ ದೇಹ ದೇವರ ನಿರ್ಮಾಣ ಎಂಬ ನಂಬುಗೆ ಮಾನವನ ಕಲ್ಪನೆಯಲ್ಲಿ ಇದ್ದೇ ಇದೆ. ಇದೊಂದು ಪ್ರಪಂಚದ ತುಂಬಾ ಇರುವ ದೇಹ ನಿರ್ಮಾಣದ ಬಗೆಗಿನ ಒಂದು ಕಲ್ಪನೆ. ಬ್ರಹ್ಮಕುಂಬಾರನು ಮಣ್ಣಿನಲ್ಲಿ ನೀರುಹಾಕಿ, ಕೆಸರು ಮಾಡಿ, ಹದಮಾಡಿ ತಿಗರಿಗೆ ಬಡಿದು ತರತರದ ಗಡಿಗೆಗಳನ್ನು ಮಾಡುವ ವರ್ಣನೆಯನ್ನು ಸಿರಗಾಪೂರ ಬಂಡೆಪ್ಪ ಬಲು ಅದ್ಭುತವಾಗಿ ಮಾಡುತ್ತಾನೆ.

***ಶಂಭೊ ನಗರದಲ್ಲಿ ಕುಂಬಾರನಿವನು***
***ನಂಬಿಗಿ ನಾವೊಂದು ಬ್ರಾಹ್ಮಣ***
***ನಿತ್ಯಗಡಗಿ ಮಾಡೋದವನ ನೇಮ***
***ಮಮಕಾರ ಮಣ್ಣತಂದು ನಿರಂಕಾರ ನೀರ್ಹಾಕಿ***
***ಅಹಂಕಾರ ಎಂಬುವ ಸಲ ಹಿಡಿದಿದ್ದ***
***ಮತ್ತು ಹಮ್ಮೆಂಬ ಹೆಂಟೆಗೆ ಹೊಡದಿದ***
***ಹೊಡೆದು ಹೊಡೆದು ನೀರ ಬಡಿದು ಮಿದು ಮಾಡಿದ್ದೆ***
***ತುಳಿ ತುಳಿದು ಮಾಡ್ಯನೊ ಕೆಸರ ಇಲ್ಲೊಕಸರ*** (ಶಿರಗಾಪೂರ ಬಂಡೆಪ್ಪ)

ಈ ದೇಹ ಮಣ್ಣಿಂದು ಎಂಬ ಅರಿವು, ಇದನ್ನು ಬೃಹ್ಮಕುಮಾರ ಮಾಡಿದ್ದನೆಂಬ ಕಲ್ಪನೆ, ಇವೆಲ್ಲಾ ತತ್ವಪದಕಾರರ ಸಾಮಾನ್ಯವಾದ ತಾತ್ವಿಕ ಪರಿಕಲ್ಪನೆಗಳು. ದೇಹದ ಪಂಚೇಂದ್ರಿಯ ಗುಣಗಳನ್ನು ಗಮನಿಸಿ ಇದನ್ನು ತೊಗಲಿನ ಚೀಲವೆಂದೂ ಮಣ್ಣಿನ ಗಡಿಗೆ ಎಂದೂ ಹೊಲವೆಂದೂ ಊರೆಂದೂ ವರ್ಣನೆ ಮಾಡುವ ಇವರು ದೇಹದ ಚಲನಶೀಲ ಗುಣಗಳನ್ನು ಗಮನಿಸಿ ಇದನ್ನು ತೇರೆಂದು, ಗಾಡಿ ಎಂದೂ ವರ್ಣನೆ ಮಾಡುತ್ತಾರೆ. ಹೀಗೆ ವರ್ಣನೆ ಮಾಡುವಾಗ ಹೋಲಿಕೆಗಳನ್ನು ಗಮನಿಸಿ ವರ್ಣಿಸುವುದು ಸಾಮಾನ್ಯವಾಗಿ ತೋರುತ್ತದೆ. ರಾಮಪೂರದ ಬಕ್ಕಪ್ಪ ಹೀಗೆ ವರ್ಣಿಸುತ್ತಾನೆ.

***ತೇರು ಸಾಗುತ್ತಾದಮ್ಮ ತಂಗಿ ।***
***ನೋಡಲಕ ಹೋಗೋಣ ಬಾರೆ***
***ಪಂಚ ಮುಖದ ಪಗಡಿಯತೇರು***
***ಹಂಚಿಕಿಲ್ಲದೆ ಸಾಗುತಾದ ॥ಪ॥***
***ಅಂಗೈ ಎಂಬ ಅಚ್ಚವ ಮಾಡಿ***
***ನಾಲ್ಕು ಗಾಲಿಗಳಿದ್ದಾವು ಜೋಡಿ***
***ಏಳು ಗೇಣಿನ ಮಂಟಪತೇರಿ***
***ಬಂಟರೈವರು ಏಳದಾರು ಕೂಡಿ*** (ರಾಮಪೂರ ಬಕ್ಕಪ್ಪನ ತತ್ವಪದಗಳು)

ಹೀಗೆ ಒಳಗಿರುವ ಪ್ರಾಣಿಗಳು, ಸಹೋದರ ಸಂಬಂಧಿಗಳು, ಊರ ಆಡಳಿತಗಾರರು ಎಲ್ಲರನ್ನು ಗೆಲ್ಲುವ ಹೋರಾಟವನ್ನು ಮಾಡಲೇಬೇಕು ಇಲ್ಲದಿದ್ದರೆ ನಿನಗೆ ಅನುಭಾವದ ಅವೃತ ದೊರೆಯಲು ಸಾಧ್ಯವೇ ಇಲ್ಲ ಎಂಬುದು ಇವರ ಅಭಿಪ್ರಾಯ, ಕೊಡಲೂರು ಬಸಲಿಂಗ ಶರಣರು ಹೇಳುತ್ತಾರೆ. ಹೋರಾಟ ನಿರಂತರವಾಗಿ ನಡೆಯಲೇಬೇಕು, ಹೋರಾಟದಲ್ಲಿ ಗೆಲ್ಲಲೇಬೇಕು. ಅಂದಾಗ ಮಾತ್ರ ನಿಜಮುಕ್ತಿ ದೊರೆಯಲು ಸಾಧ್ಯ.

***ಹತ್ತು ಮಂದಿ ಕಳ್ಳರವರು***
***ಮುತ್ತಿಗ್ಹಾಕಿ ಕನ್ನಕೊರೆದು***
***ಮತ್ತೆ ಅವರಲಿ ಒಬ್ಬ ಸಿಕ್ಕನೊ***
***ಎತ್ತಿ ಕೈಗೆ ಕೋಳ ಹಾಕ್ಯನೋ ॥2॥***

ಹೀಗೆ ಅಂತರಂಗದಲ್ಲಿ ನಿರಂತರವಾಗಿ ಹೋರಾಟ ಮಾಡುತ್ತಾ ದುಷ್ಟಶಕ್ತಿಗಳ ಸಂಪೂರ್ಣ ದಮನಕ್ರಿಯೆ ಮುಗಿದ ನಂತರವೇ ಜ್ಞಾನ ಸಾಧ್ಯವಾಗುತ್ತದೆ. ಜೊತೆಗೆ ನಿನ್ನ ಸಂಸಾರವೆಂಬ ವ್ಯವಹಾರವನ್ನು ನಾಜೂಕಿನಿಂದ ಮಾಡಬೇಕಾಗುತ್ತದೆ. ಅನುಭಾವದ ವ್ಯವಹಾರ ಹೇಗೆ ಎಂಬುದನ್ನು ಸಿರಗಾಪೂರ ಬಂಡೆಪ್ಪ ಹೀಗೆ ಹೇಳುತ್ತಾನೆ.

***ನಾಜುಕಲಿಂದ ಮಾಡಪ ಸಂತಿ***
***ನಾಸಿಕ ಕೊನಿಯೊಳು ಇಡು ನೀ ಚಿಂತಿ***
***ತ್ರಿಕೂಟ ತಣಿಸಿ ಹಿಡಿಯಣ್ಣ ।***
***ಈ ತಕ್ಕಡಿಯೊಳು***
***ಧರ್ಮಎಂಬೊಧ್ಯಾನವತೂಗಣ್ಣ***
***ಸುಳ್ಳೆಂಬುವದರಿತು***
***ಸತ್ಯಕ ನೀ ಸಾಯಲುಬೇಕಣ್ಣ***
***ಖರೆಎಂಬುದು ಬುದ್ಧನ ಬೆಂಕಿ***
***ಎಚ್ಚರಲಿಂದಯಾರಪ ಮಾಡಣ*** ॥ (ಸಿರಗಾಪೂರ ಬಂಡೆಪ್ಪ)

ಹೀಗೆ ಜೀವನವೆಂಬ ವ್ಯಾಪಾರ ಮಾಡಿದಾಗ ಮಾತ್ರ ಈ ಮಾನವ ಜನ್ಮ ಕಡೆಗಾಗಲು ಸಾಧ್ಯವೆಂಬ ಅನುಭಾವ ಅವರದು, ಈ ತನುವೆಂಬ ಭಾಂಡೆಯನ್ನು ತೊಳೆದು ಮನವ ಜಂಜಾಟದ ಮುಸುರಿಯ ಕಳೆದು, ಘನವೆಂಬ ಜ್ಞಾನದ ಮನಿಯನ್ನು ಸ್ವಚ್ಛಗೊಳಿಸಿ, ಗುಣಗಳೆಂಬ ಒಲಿಗುಂಡ ಹುಡಿದು, ಅಡಗಿಯ ಮಾಡಿಸಿ ಉಣಬೇಕೆಂಬುದು ಅವರ ನಿಲುವು. ಅಂತರಂಗದ ಒಟ್ಟು ಶುದ್ಧಿಯಿಂದ ನಮಗೆ ಜ್ಞಾನ ದೊರೆಯಲು ಸಾದ್ಯ ಇದರಿಂದ ಮುಕ್ತಿ ದೊರೆಬೇಕೆಂಬುದು ಅವರ ಅಭಿಪ್ರಾಯ.

**ಪರಾಮರ್ಶನ ಗ್ರಂಥಗಳು**


- ಕರ್ನಾಟಕದ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ. (2017). ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಡಾ.ಬಸವರಾಜ ಸಬರದ. (2000). ಕಡಕೋಳ ಮಡಿವಾಳಪ್ಪನ ತತ್ವ ಪದಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಅಮರೇಶ ನುಗಡೋಣಿ. (1999). ನುಡಿವ ಬೆಡಗು. ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವ್ಹಿ.ಜಿ.ಪೂಜಾರ. (2004). ಸ್ವರ ವಚನ ಸಾಹಿತ್ಯ. ಪ್ರಸಾರಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.
- ಶಾಂತಪ್ಪ. ಟಿ. ಗುರೋಡೆ. (2010). ಗುಲ್ಬರ್ಗ ಜಿಲ್ಲೆಯ ತತ್ವ ಪದಕಾರರು. ತುಳಸಿ ಪ್ರಕಾಶನ, ಕಲಬುರಗಿ.